8

## ಅಪೀಲು ಸ್ಥಾಯಿ ಸಮಿತಿ (ತೆರಿಗೆ) ಅಧಿಕಾರವನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:15-05-2015 ರ ನಡವಳಿಗಳು

**ವಿಷಯದ ಸಂಖ್ಯೆ: ಅಸ್ಥಾಸ/(ತೆ)/63/2014-15**

**ನಡುವೆ:**

**ವಾದಿ (Appellant)**

ಮೆ॥ ಕರ್ನಾಟಕ ಲಿಸಿಂಗ್ ಮತ್ತು ಕಮರ್ಷಿಯಲ್ ಕಾರ್ಪೋರೇಷನ್,
ನಂ.48, ಚರ್ಚ್ ಸ್ಟ್ರೀಟ್,
ಬೆಂಗಳೂರು – 01

ಮತ್ತು

**ಪ್ರತಿವಾದಿ (Respondent)**

ಸಹಾಯಕ ಕಂದಾಯ ಅಧಿಕಾರಿ
(ಶಾಂತಿನಗರ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು.

**ಪ್ರಸ್ತಾವನೆ:**

ಮೆ॥ ಕರ್ನಾಟಕ ಲಿಸಿಂಗ್ ಮತ್ತು ಕಮರ್ಷಿಯಲ್ ಕಾರ್ಪೋರೇಷನ್, ನಂ.48, ಚರ್ಚ್ ಸ್ಟ್ರೀಟ್, ಬೆಂಗಳೂರು – 01 ಇವರು ಜಂಟಿ ಆಯುಕ್ತರು (ಪೂರ್ವ) ರವರು ಹೊರಡಿಸಿರುವ ಆದೇಶ ದಿನಾಂಕ: 17-05-2011 ರ ವಿರುದ್ಧ ಮೇಲ್ಮನವಿ ಸಲ್ಲಿಸಿರುವ ಬಗ್ಗೆ.

## ಆದೇಶ

ಪ್ರಕರಣವನ್ನು ಕರೆಯಲಾಯಿತು. ವಾದಿ ಹಾಗೂ ಪ್ರತಿವಾದಿಗಳು ಹಾಜರಿರುತ್ತಾರೆ.

ಇದೇ ವಿಷಯದ ಬಗ್ಗೆ M.A.1/2013 ಪ್ರಕರಣವು CCH42 XLI Additional City Civil and Session Judgeರ ಮುಂದೆ ವಿಚಾರಣೆಯಲ್ಲಿರುವುದಾಗಿ ಉಭಯತರರು ತಿಳಿಸಿದರು. ನ್ಯಾಯಾಲಯದಲ್ಲಿ ಬಾಕಿ ಇರುವ ಅದೇ ವಿಷಯವನ್ನು ಆಡಳಿತಗಾರರು ವಿಚಾರಿಸುವುದು ಕಾನೂನಾತ್ಮಕವಾಗಿ subjudice ಆಗುವುದರಿಂದ ಸಾಧ್ಯವಿಲ್ಲ. ಆದ್ದರಿಂದ ಈ ಪ್ರಕರಣವು (Not maintainable) ಪರಿಗಣಿಸಲು ಅರ್ಹವಲ್ಲವೆಂದು ತೀರ್ಮಾನಿಸಿ ವಜಾ ಮಾಡಲು ಆದೇಶಿಸಿದೆ.

(ಟಿ.ಎಂ.ವಿಜಯಭಾಸ್ಕರ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಅಪೀಲು ಸ್ಥಾಯಿ ಸಮಿತಿಯ (ಆರೋಗ್ಯ) ಅಧಿಕಾರವನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:15-05-2015 ರ ನಡವಳಿಗಳು

**ವಿಷಯದ ಸಂಖ್ಯೆ :ಅಸ್ಥಾಸ/(ಆ)/74/2015-16**

**ವಾದಿ (Appellant)**

ಶ್ರೀಮತಿ.ಸುಶೀಲ, ನಂ.235,
5ನೇ ಸ್ಕ್ವೆರ್, ಆಸ್ಟಿನ್ ಟೌನ್,
ಬೆಂಗಳೂರು

ಮತ್ತು

**ಪ್ರತಿವಾದಿ (Respondent)**

ಆರೋಗ್ಯ ವೈದ್ಯಾಧಿಕಾರಿ
(ಶಾಂತಿನಗರ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು.

**ಪ್ರಸ್ತಾವನೆ:**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಎನ್.ಸುಶೀಲ ರವರು ನಂ.235, 5ನೇ ಸ್ಕ್ವೆರ್, ಆಸ್ಟಿನ್ ಟೌನ್, ಬೆಂಗಳೂರು ಇಲ್ಲಿ ವಾಟರ್ ಸಪ್ಲೈ ಮತ್ತು ಸರ್ವೀಸ್ ಸ್ಟೇಷನ್‌ಗಾಗಿ 2 ಹೆಚ್.ಪಿ. ಉದ್ದಿಮೆ ಪರವಾನಗಿಯನ್ನು ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಪರವಾನಗಿಗಾಗಿ ಮಾಲೀಕರ ಹಾಗೂ ನೆರೆಹೊರೆಯವರ ನಿರಾಕ್ಷೇಪಣೆ, ಖಾತಾ ಎಕ್ಸ್ಟ್ರಾಕ್ಟ್, ಟ್ಯಾಕ್ಸ್ ಪೇಡ್ ರಶೀದಿ ನೀಡಿರುತ್ತಾರೆ. ಆದರೆ, ಆರೋಗ್ಯ ವೈದ್ಯಾಧಿಕಾರಿ (ಶಾಂತಿನಗರ) ರವರು ಸದರಿಯವರ ಅರ್ಜಿಯನ್ನು ದಿನಾಂಕ:17-11-2014 ರಂದು ತಿರಸ್ಕರಿಸಿ, ನೀಡಿರುವ ಹಿಂಬರಹದ ವಿರುದ್ಧ ಮೇಲ್ಮನವಿ ಸಲ್ಲಿಸಿರುತ್ತಾರೆ.

ಸದರಿ ಉದ್ದಿಮೆಯು ವಸತಿ ವಲಯದಲ್ಲಿ ನಿಯಮ ನಿರ್ಬಂಧನೆಗಳ ವ್ಯತಿರಿಕ್ತವಾಗಿ ಮಾನ್ಯ ಉಚ್ಚ ನ್ಯಾಯಾಲಯದ ಆದೇಶ ರಿಟ್ ಸಂಖ್ಯೆ:3676/2008ರ ರೀತ್ಯಾ ಹಿಂಬರಹವನ್ನು ಜಾರಿ ಮಾಡಲಾಗಿರುತ್ತದೆ. ಆದರೆ ಅರ್ಜಿದಾರರು ವಾಣಿಜ್ಯ ತೆರಿಗೆ, ವಿದ್ಯುತ್ ಮತ್ತು ನೀರಿನ ಬಳಕೆಗೆ ವಾಣಿಜ್ಯ ಶುಲ್ಕವನ್ನು ಪಾವತಿಸಿರುತ್ತಾರೆ ಎಂದು ತಿಳಿಸಿರುತ್ತಾರೆ.

ಆರೋಗ್ಯ ವೈದ್ಯಾಧಿಕಾರಿ (ಶಾಂತಿನಗರ) ರವರು ನೀಡಿರುವ ಹಿಂಬರಹದ ಬಗ್ಗೆ ಅರ್ಜಿದಾರರಾದ ಶ್ರೀಮತಿ. ಎನ್.ಸುಶೀಲ, ರವರು ಸಮಿತಿಯಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಈ ಬಗ್ಗೆ ಸೂಕ್ತ ತೀರ್ಮಾನಕ್ಕಾಗಿ ಅಪೀಲು ಸ್ಥಾಯಿ ಸಮಿತಿಯ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:20-01-2015ರ ಟಿಪ್ಪಣಿ.

## ಆದೇಶ

ಪ್ರತಿವಾದಿ ಹಾಜರ್. ಮೇಲ್ಮನವಿದಾರರಿಗೆ ನೋಟಿಸು ಜಾರಿ ಮಾಡಿರುವುದಾಗಿ ಪ್ರತಿವಾದಿ ತಿಳಿಸಿ ಜಾರಿ ಮಾಡಿದ ನೋಟಿಸನ್ನು ಹಾಜರ್‌ಪಡಿಸಿದ್ದಾರೆ. ಮೇಲ್ಮನವಿದಾರರು ಸತತವಾಗಿ 5ನೇ ಬಾರಿ ಕಾರಣ ನೀಡದೇ ಮುಂದೂಡುವ ಅರ್ಜಿ ಸಲ್ಲಿಸದೇ ಗೈರು ಹಾಜರಿರುವುದು ಗಮನಿಸಲಾಯಿತು.

ಈ ಕಾರಣದಿಂದ ಮೇಲ್ಮನವಿದಾರರಿಗೆ ಪ್ರಕರಣ ಮುಂದುವರೆಸಲು ಆಸಕ್ತಿ ಇಲ್ಲವೆಂದು ತೀರ್ಮಾನಿಸಿ ಮೇಲ್ಮನವಿಯನ್ನು ವಜಾ ಮಾಡಲು ಆದೇಶಿಸಿದೆ.

(ಟಿ.ಎಂ.ವಿಜಯಭಾಸ್ಕರ್)
ಆಡಳಿತಗಾರರು

# ಅಪೀಲು ಸ್ಥಾಯಿ ಸಮಿತಿ ಅಧಿಕಾರವನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:15-05-2015 ರ ನಡವಳಿಗಳು

## ವಿಷಯದ ಸಂಖ್ಯೆ: ಅಸ್ಥಾಸ/(ಕಾ)/01/2015-16

**ನಡುವೆ:**

**ವಾದಿ (Appellant)**

ಶ್ರೀಮತಿ.ಲಕ್ಷ್ಮಿ,
ನಂ.04, 3ನೇ ಅಡ್ಡರಸ್ತೆ,
ಮುದ್ದಪ್ಪ ತೋಟ,
ಬೆಂಗಳೂರು

ಮತ್ತು

**ಪ್ರತಿವಾದಿ (Respondent)**

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು
(ಶ್ರೀರಾಮಮಂದಿರ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು.

**ಪ್ರಸ್ತಾವನೆ:**

ಶ್ರೀಮತಿ.ಲಕ್ಷ್ಮಿ, ನಂ.04, 3ನೇ ಅಡ್ಡರಸ್ತೆ, ಮುದ್ದಪ್ಪ ತೋಟ, ಬೆಂಗಳೂರು ಇವರು ರಸ್ತೆ ಅಗೆತ ಕೋರಿ ಅರ್ಜಿ ಸಲ್ಲಿಸಿದ್ದು, ಸದರಿಯವರ ಮನವಿಯನ್ನು ತಿರಸ್ಕರಿಸಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ದಿನಾಂಕ:05-03-2015 ರಂದು ನೀಡಿರುವ ಹಿಂಬರಹದ ವಿರುದ್ಧ ಮೇಲ್ಮನವಿ ಸಲ್ಲಿಸಿದ್ದು, ಸದರಿ ಮೇಲ್ಮನವಿಯ ತೀರ್ಮಾನದ ಬಗ್ಗೆ.

## ಆದೇಶ

ಪ್ರಕರಣ ಕರೆಯಲಾಯಿತು. ಉಭಯತರರು ಹಾಜರ್. ವಾದಗಳನ್ನು ಮಂಡಿಸಿದರು. ದಾಖಲೆಗಳನ್ನು ಪರಿಶೀಲಿಸಲಾಯಿತು.

ಕಟ್ಟಡ ಬೈಲಾ 2003 7.2 ಪ್ರಕಾರ

"No plan shall be sanctioned for a residential detached building on a plot measuring less than 50 Sq.m. or having width less than 6 metres. In specific cases of sites for housing schemes for EWS, LIG, Slum clearance and improvement schemes as well as reconstruction in case of densely populated areas and plot sub divided due to family partitions, the Authority may relax the above conditions.

ಪ್ರಸ್ತುತ ಪ್ರಕರಣದಲ್ಲಿ ನಿವೇಶನದ ವಿಸ್ತೀರ್ಣ 15.50 Sq.m. ಇದ್ದು, ಅಗಲ 3.04 ಮೀ. ಇರುತ್ತದೆ. ಆದ್ದರಿಂದ ಈ ಪ್ರಕರಣದಲ್ಲಿ ಕಟ್ಟಡ ನಕ್ಷೆ ಅನುಮೋದನೆಯ ಅಗತ್ಯವಿಲ್ಲ. ಆದರೂ, ನಕ್ಷೆ ಮಂಜೂರು ಮಾಡಿಸಿಕೊಂಡಿದ್ದಾರೆ. ನಕ್ಷೆಯಲ್ಲಿ setback ಒಂದು ಮೀಟರ್ ಬಿಡಬೇಕು. ಆದರೆ ಈ ನಿವೇಶನವು 6 ಮೀ.ಗಿಂತ ಕಡಿಮೆ ಅಗಲವಿದೆ. ಇದು ಹೆಚ್ಚು ಜನನಿಬಿಡ ಪ್ರದೇಶ (densely populated areas) ಎಂದು ಪ್ರತಿವಾದಿಗಳು ತಿಳಿಸುತ್ತಾರೆ. ನ್ಯಾಯಾಲಯದಲ್ಲಿ ಮೇಲ್ಮನವಿದಾರರ ಪರ ತೀರ್ಪು ಆಗಿದೆ ಎಂದು ಗಮನಿಸಿದೆ.

ಆದ್ದರಿಂದ ಮೇಲ್ಮನವಿದಾರರ ಪ್ರಕರಣದಲ್ಲಿ setback ನೀಡುವ ಷರತ್ತಿಗೆ ವಿನಾಯ್ತಿ ನೀಡುವುದು ಸಮಂಜಸವಾಗಿದೆ.

ಆದ್ದರಿಂದ ಮೇಲ್ಮನವಿದಾರರ ಪ್ರಕರಣದಲ್ಲಿ setback ನೀಡುವ ಷರತ್ತಿಗೆ ವಿನಾಯ್ತಿ ನೀಡಲು ಆದೇಶಿಸಿದೆ ಹಾಗೂ ಅವರಿಗೆ ರಸ್ತೆ ಅಗೆತ ಪರವಾನಿಗೆಯನ್ನು ನಿಯಮಾನುಸಾರ ನೀಡಲು ನಿರ್ದೇಶಿಸಿದೆ.

ಸಹಿ/-
(ಟಿ.ಎಂ.ವಿಜಯಭಾಸ್ಕರ್)
ಆಡಳಿತಗಾರರು